ಕೆಲವೊಮ್ಮೆ ಇಲಿಗಳೂ ತಾವೇನು ಕಡಿಮೆ ಎಂದು ತಮ್ಮ ಕುಶಲ ಕಲೆಯನ್ನು ಪ್ರದರ್ಶಿಸಿರುತ್ತವೆ. ಕೆಲವು ತಡಿಗಳಿಗೆ ದಿಂಬುಗಳಿಗೆ ವರ್ಷಕ್ಕೊಮ್ಮೆ ಬಿಸಿಲಿನಲ್ಲಿ ಮಲಗಿ ದೊಣ್ಣೆಯಿಂದ ಬಡಿಸಿಕೊಳ್ಳುವ ಭಾಗ್ಯ! ಹಾಗೆ ಬಡಿತ ತಿಂದೂ ತಿಂದೂ ಅವುಗಳ ಮೇಲಂಗಿಯೇ ಹರಿದುಹೋಗಿ ಅಂತಹವರಿಗೆಲ್ಲ ಹೊಸ ಅಂಗಿಗಳನ್ನು ಹಾಕಿಸಬೇಕಾಗುತ್ತಿತ್ತು. ನಾನು ಆದಿನ ನೋಡುತ್ತಲೇ ಇದ್ದೆ, ಅದೆಷ್ಟು ವೇಗವಾಗಿ ಹಾಸಿಗೆ ರಿಪೇರಿಯಾಗಿ ಆತ ವಾಹನವೇರಿ ನಡೆದೇಬಿಟ್ಟ. ನಮ್ಮ ಚಿಕ್ಕಂದಿನ ಹಾಸಿಗೆ ರಿಪೇರಿ ನೆನಪಾಯಿತು.

ಅಬ್ಬಾ! ಅದೊಂದು ಸಂಭ್ರಮ.

ಎಲ್ಲೆಲ್ಲೋ ಇದ್ದ ಹರಕು ಮುರುಕು ತಡಿಗಳೆಲ್ಲ ಗಂಟು ಗಂಟಾದ, ಬತ್ತಿ ಬಸವಳಿದ ಸಂಗಾತಿ ತಲೆದಿಂಬುಗಳೊಂದಿಗೆ ಅಂಗಳಕ್ಕಿಳಿಯುತ್ತಿದ್ದವು. ಅಂಗಾಂಗಗಳನ್ನು ಕಳಚಿಕೊಂಡು ಮತ್ತೆ ಹೊಸದಾಗುವ ಪರಿ. ನನಗೂ ಒಂದು ಹೊಸ ಹಾಸಿಗೆ ಬೇಕಾಗಿತ್ತು ಎಂದು ನಾನು ರಾಗ ಎಳೆದರೆ, ನಿನಗೆ ಮಂಜಪ್ಪಣ್ಣನ ಹಾಸಿಗೆ ಕೊಡೋಣ ಎಂದು ಅಣ್ಣನೊಬ್ಬ ರೇಗಿಸುತ್ತಿದ್ದ.

* * *

ಆ ದಿನಗಳಲ್ಲಿ ಸಾಮಾನ್ಯವಾಗಿ ನಮ್ಮಂತಹ ಬಹಳ ಜನರಿರುವ ಕೆಲವು ಮನೆಗಳಿಗೆ ಸಂಬಂಧಿಕರಲ್ಲದವರೂ ಬಂದು ಉಳಿಯುತ್ತಿದ್ದರು. ವಾಹನ ಸೌಲಭ್ಯಗಳು ಹೆಚ್ಚಿಲ್ಲದ ಕಾರಣ ಉಳಿಯುವುದು ಅನಿವಾರ್ಯವಾಗಿತ್ತು. ಗೋಕರ್ಣದ ಭಟ್ಟರು, ಸಂಭಾವನೆಯವರು, ವಧು ವರಾನ್ವೇಷಣೆ ಮಾಡುವವರು, ಶ್ಯಾನುಭೋಗರು, ಮೇಷ್ಟ್ರುಗಳು ಕೊನೆಯ ಬಸ್ಸುತಪ್ಪಿ ಊರಿಗೆ ಬಸ್ಸಿಲ್ಲದೆ, ಕೊನೆಗೆ ನಮ್ಮೂರಿನ ಬಸ್ಸು ನೋಡಿ ಹಾಗೇ ಹತ್ತಿಬರುವ ಅತಿಥಿಗಳೂ ಇರುತ್ತಿದ್ದರು. ಹಾಗೆ ಬಂದವರಿಗೆ ಅವರವರ ಪರಿಚಯಕ್ಕನುಸಾರವಾಗಿ ಜಗಲಿಯಲ್ಲಿ, ಅಲ್ಲೇ ಪಕ್ಕದ ಕೋಣೆಯೊಂದರಲ್ಲಿ ಇಲ್ಲವೇ ಜಗಲಿ ಮೆತ್ತಿನಲ್ಲಿ ಹಾಸಿಗೆ ಬಿಚ್ಚುತ್ತಿದ್ದರು.

ನಮ್ಮಲ್ಲಿ ಹಾಸಿಗೆಯೆಂದರೆ ತಡಿ ಅಥವಾ ಲೇಪು. ಒಮ್ಮೆ ನಮ್ಮ ಮನೆಗೆ ಆಗಾಗ ಬರುವ ಸಮೀಪದ ಊರಿನ ಹಿರಿಯರೊಬ್ಬರಿಗೆ ಜಗಲಿಯಲ್ಲಿ ಹಾಸಿಗೆ ಬಿಚ್ಚಿದ್ದರು. ಆತ ದಡ್ಡನೂ ಅಲ್ಲದ, ಬುದ್ಧಿವಂತನೂ ಅಲ್ಲದ ಮನುಷ್ಯ. ಮಾರನೆಯ ದಿನ ಆತ ಬೆಳಗ್ಗೆ ಕಾಫಿ ಕುಡಿಯಲೂ ಕೇಳದೆ ಪರಾರಿಯಾಗಿದ್ದ. ಒಂದೆರಡು ದಿನ ಉಳಿದೇ ಹೋಗುವ ಈ ಮನುಷ್ಯ ಯಾಕೆ ಹೋದ ಎಂದು ಹಿರಿಯರು ಅಚ್ಚರಿಪಟ್ಟರೆ ಜಗುಲಿ ಕಸ ಗುಡಿಸಲು ಬಂದ ಚಿಕ್ಕಮ್ಮನ ಮೂಗಿಗೆ ಗಬ್ಬುವಾಸನೆ ಬಡಿಯಿತು. 'ಹೋ! ಅಂವ ಎಂತಕ್ಕೋದ? ಈಗ ಗೊತ್ತಾತು' ಎಂದಳು. 'ಎಂತಕೇ!' ಎಂದು ಕೇಳಿದವರಿಗೆ ಹಾಸಿಗೆಯಲ್ಲಿ ಮಳೆ ಬಂದ ಹಾಗಿದೆ ಎಂದಳಾಕೆ.

'ಒಂದೋ? ಎರಡೋ ? ಯಾವ ಮಗ್ಗಿ ಹೇಳಿದಾನೆ?' ಎಂದು ಮತ್ಯಾರೋ ಕೇಳಿದಾಗ, 'ಸದ್ಯ ಒಂದು' ಎಂಬ ಉತ್ತರ ಬಂತು. ಪಾಪ ವಯೋಸಹಜ ದೌರ್ಬಲ್ಯ... ಕೊನೆಗೆ ಹಾಸಿಗೆ ಬಿಸಿಲಿಗೆ ಹಾಕಿ ಹರಸಾಹಸ ಪಟ್ಟಿದ್ದಾಯಿತು. ಅಂದಿನಿಂದ ಅದು ಮಂಜಪ್ಪಣ್ಣನ ಹಾಸಿಗೆ ಎಂದು ಕರೆಸಿಕೊಂಡು ಕೆಲವು ಕಾಲ ಹಾಗೇ ಇತ್ತು. ಈ ಅನುಭವದ ನಂತರ ನಾವು ಕೆಲವು ಹಾಸಿಗೆಗಳನ್ನು ಸಾರ್ವಜನಿಕರಿಗೆ ಎಂದೇ ಮೀಸಲಿರಿಸಿದೆವು.

ಬಹಳ ಜನರಿರುವ ಮನೆಯಾದ್ದರಿಂದ ನಾಕಾರು ವರ್ಷಗಳಿಗೊಮ್ಮೆಯಾದರೂ ಹಾಳಾಗಿರುವ ಕೆಲವು ತಡಿಗಳನ್ನು ದುರಸ್ತಿ ಮಾಡಿಸಬೇಕಾಗುತ್ತಿತ್ತು. ಮಕ್ಕಳು ಮರಿಗಳು ಮಗ್ಗಿಹೇಳದಂತೆ ರಬ್ಬರ್ ಶೀಟ್ ಹಾಸಿ ಮುನ್ನೆಚ್ಚರಿಕೆ ವಹಿಸಿದ್ದರೂ ಕೆಲವೊಮ್ಮೆ ಪರಾಮಶಿಗೆ ಒಳಗಾಗಿ ತಡಿಗಳು ಬಿಸಿಲಿಗೆ ಒಡ್ಡಿಕೊಳ್ಳುತ್ತಿದ್ದವು. ಅಷ್ಟೇ ಅಲ್ಲ ದೊಣ್ಣೆಯಿಂದ ಬಡಿತ ತಿಂದವಕ್ಕೆ ಹೊಸ ರೂಪ ಕೊಡಬೇಕಲ್ಲ. ಜೀರ್ಣ ಶರೀರಕ್ಕೆ ಪುನಶ್ಚೇತನದ ಕಾರ್ಯಕ್ರಮ ಒಂದು ಬೆಳಿಗ್ಗೆಯಿಂದ ಶುರುವಾಗುತ್ತಿತ್ತು.

ತಡೀ ರಿಪೇರಿಯವರ ಕಾಯಕ ಬೆರಗಿನಿಂದ ಕೂಡಿರುತ್ತಿತ್ತು. ಹತ್ತಿಯನ್ನು ಬಿಲ್ಲಿನಂತಿರುವ ವಸ್ತುವಿನಿಂದ ಪಿಡಿಯುತ್ತಿದ್ದರು. ಆ ಹತ್ತಿಯನ್ನು ಅಳತೆಗನುಗುಣವಾದ ತಡಿಯಾಗಲು ಚೀಲಗಳನ್ನು ತಯಾರಿಸಿಕೊಂಡು ಅದರೊಳಗೆ ತುಂಬಿ ದೊಡ್ಡ ದಬ್ಬಣ ಅಥವಾ ಸೂಜಿಗಳಿಂದ ಸರಸರನೆ ಹೊಲಿದುಬಿಡುತ್ತಿದ್ದರು. ಅಂದು ಅಂಗಳದಲ್ಲೆಲ್ಲ ಹತ್ತಿಗಳದ್ದೇ ಹಾರಾಟ. ಕೆಲವೊಮ್ಮೆ ಬೀಜಗಳೂ ಕಾಣಸಿಗುತ್ತಿದ್ದವು.

ಮಧ್ಯಾಹ್ನ ಅವರಿಗೆ ಊಟೋಪಚಾರಗಳೂ ನಡೆಯುತ್ತಿದ್ದವು. ಕೆಲವು ಹಳೆಯಂಗಿ ಕಳಚಿ ಹೊಸದು ತೊಟ್ಟರೆ ಮತ್ತೆ ಕೆಲವು ಹೊಸ ಹತ್ತಿಯಿಂದಲೇ